**ಸಾಕ್ಷಿಗೆ ದಿನಾಂಕಃ 09-09-2019 ರಂದು ಪ್ರಮಾಣವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು ಃ ವಾದಿ ಪರಃ ಶ್ರೀ. ವಿ ಆರ್ ಎನ್ ವಕೀಲರಿಂದ ಃ</u>**

ನನಗೆ ವಾದಿಯ ಪರಿಚಯ ಇರುತ್ತದೆ. ವಾದಿಯು ದಿನಾಂಕಃ 06/09/2010 ರಂದು ನೊಂದಾಯಿತ ಕ್ರಯಪತ್ರದ ಮೂಲಕ ದಾವಾಸ್ವತ್ತನ್ನು ವೆಂಕಟರಮಣಭಟ್ಟರವರಿಂದ

ಖರೀದಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ವಾದಿಯವರ ವಾಸದ ಮನೆ ನನ್ನ ಮನೆಯ ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ವಾದಿಯು ತಾನು ಖರೀದಿಸಿದ ನಿವೇಶನದಲ್ಲಿ ಬಾವಿ ಹಾಗೂ ಮನೆಯನ್ನು ನಿರ್ಮಿಸಿಕೊಂಡಿರುತ್ತಾರೆಂದರೆ ಸರಿ. ವಾದಿ ಮೊದಲಿಗೆ ಬಾವಿಯನ್ನು ನಿರ್ಮಾಣ ಮಾಡಿ ನಂತರ ಮನೆ ನಿರ್ಮಿಸಿಕೊಂಡಿರುತ್ತಾರೆಂದರೆ ಸರಿ. ವಾದಿಯ ವಾಸದ ಮನೆಯ ಉತ್ತರ ದಿಕ್ಕಿನಲ್ಲಿರುವ ನಿವೇಶನವನ್ನು ದಿನಾಂಕಃ 10/10/2010 ರಂದು ಸುಬ್ರಹ್ಮಣ್ಯ ಭಟ್ಟರವರಿಂದ ನೊಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿರುತ್ತೇನೆಂದರೆ ಸರಿ. ವಾದಿಯ ವಾಸದ ಮನೆಯ ಅಸೆಸ್ಮೆಂಟ್ ನಂಃ 312/312 ನನ್ನ ಮಾಲೀಕತ್ವದ ಸ್ವತ್ತಿನ ಅಸೆಸ್ಮೆಂಟ್ 696/696 ಆಗಿರುತ್ತದೆ ಎಂದರೆ ಸರಿ. ನಾನು ವಾದಿಯ ಮುಖಾಂತರವೇ ನಿವೇಶನವನ್ನು ಖರೀದಿ ಮಾಡಿರುತ್ತೇನೆಂದರೆ ಸರಿ. ನಾನು ಸ್ವತ್ತನ್ನು ಖರೀದಿಸುವಾಗ ರಾಜಸ್ಥಾನದ ಜಯಪುರದಲ್ಲಿರುವ ರಾಜೀವ್ ಗಾಂಧಿ ಸಂಸ್ಕೃತ ಸಂಸ್ಥಾನದಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ.

ವಾದಿ 2009 ರಿಂದ ಶೃಂಗೇರಿಯ ರಾಜೀವ್ ಗಾಂಧಿ ಸಂಸ್ಕೃತ ವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿರುತ್ತಾರೆಂದರೆ ಸರಿ. ವಾದಿಯು ತಾನು ಖರೀದಿಸಿದ ನಿವೇಶನದಲ್ಲಿ ಮನೆ ಹಾಗೂ ಬಾವಿಯನ್ನು ನಿರ್ಮಿಸಿದ ನಂತರವೇ ನಾನು ಉತ್ತರ ದಿಕ್ಕಿನಲ್ಲಿರುವ ನಿವೇಶನವನ್ನು ಖರೀದಿಸಿರುತ್ತೇನೆಂದರೆ ಸರಿಯಲ್ಲ. ನೀವು ಸ್ವತ್ತನ್ನು ಖರೀದಿಸುವಾಗ ವಾದಿಯ ಸ್ವತ್ತಿನಲ್ಲಿ ಏನು ಇತ್ತು ಎಂದು ಹೇಳಲಾಗುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನಾನು ಹಾಗೂ ವಾದಿ ಇಬ್ಬರು ಒಂದೇ ಸಮಯದಲ್ಲಿ ನಿವೇಶನಗಳನ್ನು ಖರೀದಿಸಿರುತ್ತೇವೆಂದು ಉತ್ತರಿಸಿರುತ್ತಾರೆ.

ವಾದಿ ದಾವಾಸ್ವತ್ತನ್ನು ಖರೀದಿಸುವ ಸಮಯದಲ್ಲಿ ಸದರಿ ಸ್ವತ್ತಿನ ಉತ್ತರಕ್ಕೆ ನಾನು ಖರೀದಿಸಿದ ಸ್ವತ್ತು ಇತ್ತು ಎಂದರೆ ಸರಿ. ಆ ನಂತರ ಶೃಂಗೇರಿ-ಜಯಪುರ ಮುಖ್ಯ ರಸ್ತೆ ಬರುತ್ತದೆ ಎಂದರೆ ಸರಿ. ವಾದಿಯ ಸ್ವತ್ತಿನ ದಕ್ಷಿಣಕ್ಕೆ ಮಲ್ಲೇಶ ಎನ್ನುವವರ ಮನೆ ಬರುತ್ತದೆ ಎಂದರೆ ಸರಿ ಅದೇ ರೀತಿ ಉಳಿದೆರಡು ದಿಕ್ಕುಗಳಲ್ಲಿ ಖಾಲಿ ಜಾಗ ಬರುತ್ತದೆ ಎಂದರೆ ಸರಿ.

ನಾನು ಖರೀದಿಸಿದ ಸ್ವತ್ತಿನ ಪೂರ್ವದಿಕ್ಕಿಗೆ ಶಾಂತಮ್ಮ ರವರ ಮನೆ, ಪಶ್ಚಿಮ ದಿಕ್ಕಿಗೆ ಶಿವಶಂಕರ್ ರವರ ಮನೆ, ಉತ್ತರಕ್ಕೆ ಶೃಂಗೇರಿ-ಜಯಪುರ ರಸ್ತೆ, ದಕ್ಷಿಣಕ್ಕೆ ವಾದಿಯ ಸ್ವತ್ತು ಬರುತ್ತದೆ ಎಂದರೆ ಸರಿ. ನಾನು ಖರೀದಿಸಿರುವ ನಿವೇಶನದ ಅಳತೆ 30x40 ಆಗಿರುತ್ತದೆ ಎಂದರೆ ಸರಿ. ಸದರಿ ಸ್ವತ್ತು ನನ್ನ ಸ್ವಾಧೀನದಲ್ಲಿರುತ್ತದೆ ಎಂದರೆ ಸರಿ. ವಾದಿ ಖರೀದಿಸಿರುವ ಸ್ವತ್ತಿನ ವಿಸ್ತೀರ್ಣ 30x45 ಆಗಿರುತ್ತದೆ ಎಂದರೆ ಸರಿ. ವಾದಿಯ ಸ್ವತ್ತಿನಿಂದ ಸುಮಾರು 3-4 ಅಡಿ

ಎತ್ತರದಲ್ಲಿ ನನ್ನ ಮನೆ ಸ್ವತ್ತು ಬರುತ್ತದೆ. ವಾದಿಯು ತಮ್ಮ ಮನೆಯ ಈಶಾನ್ಯ ದಿಕ್ಕಿನಲ್ಲಿ ಬಾವಿಯನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆಂದರೆ ಸರಿ. ನನ್ನ ಹಾಗೂ ವಾದಿಯ ಮುಂಬಾಗಿಲು ಪೂರ್ವ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ನನ್ನ ಸ್ವತ್ತು ಉತ್ತರದ ಕಡೆ ಏರಿಕೆಯಲ್ಲಿದ್ದು ದಕ್ಷಿಣದ ಕಡೆ ತಗ್ಗಿನಲ್ಲಿರುತ್ತದೆ ಎಂದರೆ ಸರಿ.

ನಾನು ಮನೆ ನಿರ್ಮಿಸುವ ಸಮಯದಲ್ಲಿ ನಾನು ಹಾಗೂ ವಾದಿ ಇಬ್ಬರು ವಿಶ್ವಾಸದಿಂದಿದ್ದೆವು ಎಂದರೆ ಸರಿ. ನಾನು ಮನೆ ಕಟ್ಟಿಸುವ ಸಮಯದಲ್ಲಿ ವಾದಿಯ ಬಾವಿಯಿಂದಲೇ ನೀರನ್ನು ತೆಗೆದುಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ಮನೆ ಕಟ್ಟಿಸುವ ಸಮಯದಲ್ಲಿ ವಾದಿಯ ಬಾವಿಯಿಂದಲೇ ನಿರ್ಮಾಣಕ್ಕಾಗಿ ನೀರನ್ನು ಪಡೆದುಕೊಂಡಿದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಯು ಬಾವಿ ನಿರ್ಮಾಣ ಮಾಡುವಾಗ ನಿಮ್ಮದೇನು ತಕರಾರು ಇರಲಿಲ್ಲ ಅಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ತಾನು ಆಗ ರಾಜಸ್ಥಾನದಲ್ಲಿದ್ದು ಅಲ್ಲಿಂದ ಬರುವಷ್ಟರಲ್ಲಿ ವಾದಿಯ ಬಾವಿ ಹಾಗೂ ಮನೆಯನ್ನು ನಿರ್ಮಾಣ ಮಾಡಿಕೊಂಡಿದ್ದರು ಎಂದು ಉತ್ತರಿಸಿರುತ್ತಾರೆ. ನಾನು ಕೂಡ ನಮ್ಮ ಮನೆಯ ಈಶಾನ್ಯ ದಿಕ್ಕಿನಲ್ಲಿ ಬಾವಿ ನಿರ್ಮಿಸಿಕೊಂಡಿರುತ್ತೇನೆಂದರೆ ಸರಿ. ನಾನು ನಿರ್ಮಿಸಿಕೊಂಡಿರುವ ಬಾವಿ 45 ಅಡಿ ಆಳ, 5 ಅಡಿ ಸುತ್ತಳತೆ ಇದ್ದು ರಿಂಗ್ ಬಾವಿ ಆಗಿರುತ್ತದೆ. ಸದರಿ ಬಾವಿಯನ್ನು ನಿರ್ಮಿಸಲು ನನಗೆ 30 ಸಾವಿರಗಳಷ್ಟು ಖರ್ಚು ಆಗಿರುತ್ತದೆ. ಸದರಿ ಬಾವಿ ನಿರ್ಮಿಸಲು ನೀವು ಪರವಾನಗಿ ಪಡೆದುಕೊಂಡಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಒಟ್ಟಾಗಿ ನಾನು ಖರೀದಿಸಿದ ಸ್ವತ್ತಿನಲ್ಲಿ ಕಟ್ಟಡ ನಿರ್ಮಿಸಲು ಪರವಾನಗಿ ಪಡೆದುಕೊಂಡಿರುತ್ತೇನೆಂದು ಉತ್ತರಿಸಿರುತ್ತಾರೆ. ಬಾವಿಯನ್ನು 48 ರಿಂಗ್ ಗಳನ್ನು ಅಳವಡಿಸಿ ನಿರ್ಮಾಣ ಮಾಡಲಾಗಿರುತ್ತದೆ. ಆ ಸಮಯದಲ್ಲಿ ಬಾವಿ ನಿರ್ಮಾಣ ಮಾಡುವಾಗ ಒಂದು ಅಡಿಗೆ ಎಷ್ಟು ಖರ್ಚಾಗಿತ್ತು ಎಂದು ಹೇಳಲು ಆಗುವುದಿಲ್ಲ. ಅದೇ ರೀತಿ ಯಾರು ನಿರ್ಮಾಣ ಮಾಡಿಕೊಟ್ಟಿರುತ್ತಾರೆ ನೆನಪಿಲ್ಲ. ಸಾಕ್ಷಿದಾರರು ಮುಂದುವರೆದು ಕೇರಳದವರು ಯಾರೋ ಬಂದು ಅರ್ಧ ನಿರ್ಮಾಣ ಮಾಡಿದ್ದು ತದನಂತರ ನಮ್ಮ ಊರಿನಿಂದ ಬಂದು ಪೂರ್ತಿಗೊಳಿಸಿಕೊಟ್ಟಿರುತ್ತಾರೆ. ಬಾವಿ ನಿರ್ಮಾಣ ಮಾಡುವಾಗ ಗುತ್ತಿಗೆದಾರರಿಗೆ ಎಷ್ಟು ಹಣ ನೀಡಿರುತ್ತೇನೆ ಈಗ ನೆನಪಿಲ್ಲ. ಬಾವಿ ನಿರ್ಮಿಸುವ ಸಮಯದಲ್ಲಿ ಒಂದು ಅಡಿಗೆ 6-7 ರೂಪಾಯಿ ಇತ್ತು ಎಂದರೆ ಸರಿಯಲ್ಲ. ನಮ್ಮ ಮನೆಗೆ ಇಲ್ಲಿಯವರೆಗೂ ನಲ್ಲಿ ಸಂಪರ್ಕ ಪಡೆದಿರುವುದಿಲ್ಲ ಎಂದರೆ ಸರಿ.

ವಾದಿಯು ತಮ್ಮ ಮನೆಗೆ ನಲ್ಲಿ ನೀರಿನ ಸಂಪರ್ಕ ಪಡೆದುಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ವಾದಿಯು ತಾನು ನಿರ್ಮಿಸಿದ್ದ ಬಾವಿಯ ನೀರನ್ನು ಉಪಯೋಗಿಸಲು ಅನರ್ಹವಾದ ಕಾರಣ ನಲ್ಲಿ ನೀರಿನ ಸಂಪರ್ಕ ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ. ವಾದಿ ನಿರ್ಮಿಸಿರುವ ಬಾವಿಯಲ್ಲಿನ ನೀರು ಈಗಲೂ ಸಹ ವಾಸನೆ ಬರುತ್ತಿದ್ದು ,ಕುಡಿಯಲು ಉಪಯೋಗಿಸಲು ಅನರ್ಹವಾಗಿರುತ್ತದೆ ಎಂದರೆ ಸರಿಯಲ್ಲ. ಈ ಬಗ್ಗೆ ನ್ಯಾಯಾಲಯದಿಂದ ನಿಯೋಗಿಯನ್ನು ನೇಮಕ ಮಾಡಿ ಬಾವಿಯ ನೀರನ್ನು ಪರೀಕ್ಷಿಸಲು ನಿಮದೇನಾದರೂ ತೊಂದರೆ ಇದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

ವಾದಿಯು ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಖಾಸಗಿ ಫಿರ್ಯಾದನ್ನು ಸಲ್ಲಿಸಿರುತ್ತಾರೆಂದರೆ ಸಾಕ್ಷಿದಾರರು ನನ್ನ ವಿರುದ್ಧ ಸುಳ್ಳು ಫಿರ್ಯಾದನ್ನು ಸಲ್ಲಿಸಿರುತ್ತಾರೆಂದು ನುಡಿದಿರುತ್ತಾರೆ. ಸದರಿ ಖಾಸಗಿ ಫಿರ್ಯಾದು ಇದೇ ನ್ಯಾಯಾಲಯದಲ್ಲಿ ಸಿಸಿ. 248/2018 ರಂತೆ ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇರುತ್ತದೆ ಎಂದರೆ ಗೊತ್ತಿಲ್ಲ. ವಾದಿಯು ನನ್ನ ವಿರುದ್ಧ ಖಾಸಗಿ ಫಿರ್ಯಾದನ್ನು ಸಲ್ಲಿಸಿದ ನಂತರ ನಾನು ವಾದಿಗೆ ನಿಪಿ-9 ರಂತೆ ಕಾನೂನು ತಿಳುವಳಿಕೆ ನೀಡಿರುತ್ತೇನೆಂದರೆ ಸಾಕ್ಷಿದಾರರು ನಾನು ನೋಟೀಸು ನೀಡಿದ ನಂತರ ವಾದಿ ನನ್ನ ವಿರುದ್ಧ ಸುಳ್ಳು ಫಿರ್ಯಾದು ದಾಖಲಿಸಿರುತ್ತಾರೆಂದು ನುಡಿದಿರುತ್ತಾರೆ. ವಾದಿಯು ನನ್ನ ವಿರುದ್ಧ ಖಾಸಗಿ ಫಿರ್ಯಾದನ್ನು ದಾಖಲಿಸಿದ ನಂತರವೇ ನಾನು ನಿಪಿ-9 ರಂತೆ ನೋಟೀಸು ನೀಡಿರುತ್ತೇನೆಂದರೆ ಸರಿಯಲ್ಲ. ನಾನು ನಿಪಿ-9 ರಂತೆ ಸುಳ್ಳು ನೋಟೀಸನ್ನು ಕಳುಹಿಸಿರುತ್ತೇನೆಂದರೆ ಸರಿಯಲ್ಲ. ಸದರಿ ನಾನು ಕಳುಹಿಸಿದ ನೋಟೀಸಿಗೆ ವಾದಿಯು ಪ್ರತ್ಯುತ್ತರ ನೀಡಿರುತ್ತಾರೆಂದರೆ ಸರಿ.

ನನ್ನ ಹಾಗೂ ವಾದಿಯ ಮನೆಯ ನಡುವೆ ಕಾಂಪೌಂಡ್ ಇರುತ್ತದೆ ಎಂದರೆ ಸರಿ. ಸದರಿ ಕಾಂಪೌಂಡನ್ನು ಇಬ್ಬರು ಸೇರಿ ನಿರ್ಮಾಣ ಮಾಡಿಕೊಂಡಿರುತ್ತೇವೆ. ಇಬ್ಬರು ಸೇರಿ ಕಾಂಪೌಂಡನ್ನು ನಿರ್ಮಿಸಿಕೊಂಡಿರುವುದರಿಂದ ಜಾಗವನ್ನು ಅತಿಕ್ರಮಣ ಮಾಡುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸಾಕ್ಷಿದಾರರು ವಾದಿಯು ಈ ಮೊದಲೇ ಒಂದು ಕಾಲು ಅಡಿ ಅತಿಕ್ರಮಿಸಿದ್ದರೂ ಆ ನಂತರ ಕಾಂಪೌಂಡನ್ನು ನಿರ್ಮಾಣ ಮಾಡಿಕೊಂಡಿರುತ್ತೇವೆಂದು ನುಡಿದಿರುತ್ತಾರೆ. ವಾದಿ ಯಾವಾಗ ನಾನು ಹೇಳಿದಂತೆ ಜಾಗವನ್ನು ಅತಿಕ್ರಮಣ ಮಾಡಿರುತ್ತಾರೆಂದು ಹೇಳಲಾಗುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ತಾನು ರಾಜಸ್ಥಾನದಲ್ಲಿದ್ದು , ತಾನು ಖರೀದಿಸಿದ ಸ್ವತ್ತಿನಲ್ಲಿ ಮನೆ ನಿರ್ಮಾಣ ಮಾಡಲು ಬಂದ ಸಮಯದಲ್ಲಿ ಅತಿಕ್ರಮಣ ಮಾಡಿರುವ ವಿಚಾರ ಗೊತ್ತಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಆ

ಬಗ್ಗೆ ಕಾನೂನು ಕ್ರಮ ಏನಾದರೂ ತೆಗೆದುಕೊಂಡಿದ್ದಿರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಮೌಖಿಕವಾಗಿ ಹಲವಾರು ಬಾರಿ ವಾದಿಯನ್ನು ಅತಿಕ್ರಮಣವನ್ನು ತೆರವು ಮಾಡುವಂತೆ ಕೇಳಿಕೊಂಡಿರುತ್ತೇನೆ ಈ ಬಗ್ಗೆ ಕಾನೂನು ತಿಳುವಳಿಕೆಯನ್ನು ಸಹ ನೀಡಿರುತ್ತೇನೆಂದು ಉತ್ತರಿಸಿರುತ್ತಾರೆ. ನಾನು ವಾದಿಯ ಜಾಗವನ್ನು ಒತ್ತುವರಿ ಮಾಡಿಕೊಂಡು ಕಾಂಪೌಂಡ್ ನಿರ್ಮಾಣ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ಹಿಂಭಾಗದಿಂದ ಕಾಂಪೌಂಡ್ ನೇರವಾಗಿದ್ದು , ಮುಂಭಾಗದಲ್ಲಿ ಬಾವಿಯನ್ನು ಒತ್ತುವರಿ ಮಾಡಿಕೊಂಡು ಕಾಂಪೌಂಡ್ ನಿರ್ಮಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಆ ಸಮಯದಲ್ಲಿ ವಾದಿಯ ಗಲಾಟೆ ಮಾಡಿದಾಗ ಕಾಂಪೌಂಡನ್ನು ಬಾವಿಯನ್ನು ಬಿಟ್ಟು ನಿರ್ಮಾಣ ಮಾಡುತ್ತೇನೆಂದು ತಿಳಿಸಿದ್ದೆ ಎಂದರೆ ಸರಿಯಲ್ಲ.

ನಾನು ನಿವೇಶನವನ್ನು ಖರೀದಿಸುವ ಸಮಯದಲ್ಲಿ ಪಶ್ಚಿಮ ಭಾಗದಲ್ಲಿರುವ ಶಿವಶಂಕರ್ ರವರ ಸ್ವತ್ತು ಒಂದೇ ಸಮತಟ್ಟಾಗಿತ್ತು ಎಂದರೆ ಸರಿಯಲ್ಲ. ಸದರಿ ಶಿವಶಂಕರ್ ರವರ ಸ್ವತ್ತಿನಿಂದ ಸುಮಾರು 2 ರಿಂದ 2 ವರೆ ಅಡಿ ತಗ್ಗಿನಲ್ಲಿ ನನ್ನ ನಿವೇಶನ ಬರುತ್ತದೆ. ನನ್ನ ಮನೆ ಎತ್ತರದ ಪ್ರದೇಶದಲ್ಲಿರುವುದರಿಂದ ನನ್ನ ಮನೆಯ ಮಾಡಿನ ಹಾಗೂ ಇತರೆ ನೀರುಗಳೆಲ್ಲ ಮನೆ ಮುಂಭಾಗದ ಚರಂಡಿ ಮೂಲಕವೇ ಹರಿದುಹೋಗಬೇಕು ಎಂದರೆ ಸಾಕ್ಷಿದಾರರು ಮನೆಯ ಒಂದು ಭಾಗದ ನೀರು ಚರಂಡಿಯಲ್ಲಿ ಹರಿದುಹೋಗುತ್ತಿದ್ದು , ಇತರೆಭಾಗದ ನೀರು ಪಶ್ಚಿಮ ಭಾಗದ ಹಿಂಭಾಗದಲ್ಲಿ ಹೋಗುತ್ತದೆ ಎಂದು ಉತ್ತರಿಸಿರುತ್ತಾರೆ. ವಾದಿ ತನ್ನ ಪಶ್ಚಿಮ ದಿಕ್ಕಿನಲ್ಲಿಯೂ ಸಹ ಕಾಂಪೌಂಡ್ ನಿರ್ಮಾಣ ಮಾಡಿಕೊಂಡಿರುತ್ತಾರೆಂದರೆ ಸರಿ. ನಮ್ಮ ಮನೆಯ ನೀರು ಸದರಿ ಕಾಂಪೌಂಡ್ ನ ಒಳಭಾಗದಿಂದಲೇ ಹರಿದುಹೋಗುತ್ತದೆ ಎಂದರೆ ಸರಿಯಲ್ಲ. ಆ ರೀತಿ ನೀರು ಹರಿದುಹೋಗಲು ವಾದಿಯು ಮೌಖಿಕವಾಗಿ ಅನುಮತಿಯನ್ನು ನೀಡಿರುತ್ತಾರೆ. ನಾನು ಮನೆ ನಿರ್ಮಿಸಲು ಸ್ವತ್ತನ್ನು ಸಮತಟ್ಟು ಮಾಡಿದಾಗಲೇ ವಾದಿಯು ಮೌಖಿಕವಾಗಿ ಅನುಮತಿ ನೀಡಿರುತ್ತಾರೆ. ವಾದಿಯು ಮನೆ ಹಿಂಭಾಗದಲ್ಲಿ ನೀರು ಹರಿದುಹೋಗಲು ಯಾವುದೇ ರೀತಿಯ ವ್ಯವಸ್ಥೆ ಇರುವುದಿಲ್ಲ ಅದೇ ರೀತಿ ವಾದಿಯು ನನಗೆ ಮೌಖಿಕವಾಗಿ ಅನುಮತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ವಾದಿ ನಿರ್ಮಿಸಿರುವ ಕಾಂಪೌಂಡ್ ನಿಂದ ಹೊರಭಾಗದಲ್ಲಿ ನೀರು ಹರಿದುಹೋಗಲು ಜಾಗವಿದ್ದರೂ ನಾನು ನಮ್ಮ ಮನೆಯ ನೀರನ್ನು ವಾದಿಯ ಕಾಂಪೌಂಡ್ ಒಳಗೆ ಹರಿದುಹೋಗಲು ಬಿಟ್ಟಿರುತ್ತೇನೆಂದರೆ ಸರಿಯಲ್ಲ.

ವಾದಿಯು ನಾನು ಮನೆ ನಿರ್ಮಿಸುವ ಸಮಯದಲ್ಲಿಯೇ ತನ್ನ ಮನೆಯ ಈಶಾನ್ಯ ದಿಕ್ಕಿನಲ್ಲಿ ಸುಮಾರು 5 ಅಡಿ ಸುತ್ತಳತೆಯ 40 ಅಡಿ ಆಳದ ಬಾವಿಯನ್ನು ಸುಮಾರು ಒಂದುವರೆ ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿ ನಿರ್ಮಾಣ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ವಾದಿಯ ಬ್ರಾಹ್ಮಣ ಸಮುದಾಯದವರಾಗಿದ್ದು, ಸಂಪ್ರದಾಯ ಕುಟುಂಬದವರಿಂದ ಬಂದಿರುತ್ತಾರೆಂದರೆ ಸರಿ. ನಾನು ನನ್ನ ಮನೆಯ ಕಶ್ಮಲದ ನೀರನ್ನು ದುರುದ್ದೇಶಪೂರಕವಾಗಿ ನೇರವಾಗಿ ವಾದಿಯ ಮನೆಯ ಉತ್ತರ ದಿಕ್ಕಿನಲ್ಲಿ ಸಣ್ಣ ಗುಂಡಿ ತೋಡಿ ನೇರವಾಗಿ ಕೊಳಕು ನೀರು ವಾದಿಯ ಬಾವಿಗೆ ಹೋಗುವಂತೆ ರಿಂಗನ್ನು ಕೊರೆದು ಬಿಟ್ಟಿರುತ್ತೇನೆಂದರೆ ಸುಳ್ಳು. ಸದರಿ ವಿಷಯವಾಗಿ ವಾದಿಯ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೂ ದೂರನ್ನು ನೀಡಿರುತ್ತಾರೆಂದರೆ ಸರಿಯಲ್ಲ. ಮೇಲ್ಕಂಡಂತೆ ನನ್ನ ದುಷ್ಕೃತ್ಯದಿಂದಾಗಿ ವಾದಿಯು ನಿರ್ಮಾಣ ಮಾಡಿದ್ದ ಬಾವಿ ಸಂಪೂರ್ಣವಾಗಿ ಹಾಳಾಗಿರುತ್ತದೆ ಎಂದರೆ ಸರಿಯಲ್ಲ. ಆ ನಂತರ ವಾದಿ ನಲ್ಲಿ ನೀರಿನ ಸಂಪರ್ಕ ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ.

ಆ ನಂತರ ವಾದಿ ಈ ಬಗ್ಗೆ ಮೆಣಸೆ ಗ್ರಾಮ ಪಂಚಾಯಿತಿಯವರಿಗೆ ದೂರನ್ನು ನೀಡಿದ್ದು , ಮೆಣಸೆ ಗ್ರಾಮ ಪಂಚಾಯಿತಿ ಪಿ ಡಿ ಓ ದಿನಾಂಕಃ 06/06/2014 ರಂದು ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲಿಸಿ ನನಗೆ ನನ್ನ ಮನೆಯ ಕೊಳಕು ನೀರನ್ನು ವಾದಿಯಬಾವಿಗೆ ಬಿಡದಂತೆ ಎಚ್ಚರಿಕೆ ನೀಡಿದ್ದರು ಎಂದರೆ ಸರಿಯಲ್ಲ. ಆ ನಂತರವೂ ಕೂಡ ನಾನು ದ್ವೇಷದಿಂದ ನೀರನ್ನು ಬಿಡುವುದನ್ನು ತಡೆದಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಈ ಸಂಬಂಧವಾಗಿ ತಾಲ್ಲೂಕು ಪಂಚಾಯಿತಿ, ಶೃಂಗೇರಿ ತಹಶೀಲ್ದಾರ್, ತಾಲ್ಲೂಕು ಆರೋಗ್ಯಾಧಿಕಾರಿ , ಜಿಲ್ಲಾಧಿಕಾರಿಗಳು ಹಾಗೂ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರಿಗೆ ದೂರನ್ನು ನೀಡಿರುತ್ತಾರೆಂದರೆ ಸರಿಯಲ್ಲ. ಸದರಿಯವರುಗಳು ಯಾವುದೇ ಕ್ರಮ ತೆಗೆದುಕೊಳ್ಳದ ಕಾರಣ ವಾದಿಯು ಶೃಂಗೇರಿ ಪೊಲೀಸರಿಗೆ ದೂರನ್ನು ನೀಡಿರುತ್ತಾರೆಂದರೆ ಸಾಕ್ಷಿದಾರರು ಸುಳ್ಳು ದೂರು ನೀಡಿರುತ್ತಾರೆಂದು ನುಡಿದಿರುತ್ತಾರೆ. ಆಗ ಶೃಂಗೇರಿ ಪೊಲೀಸರು ಸಮಸ್ಯೆಯನ್ನು ಪಂಚಾಯಿತಿಯಲ್ಲಿ ಬಗೆಹರಿಸಿಕೊಳ್ಳಿ ಎಂದು ಹಿಂಬರಹ ನೀಡಿರುತ್ತಾರೆಂದರೆ ಸಾಕ್ಷಿದಾರರು ಸುಳ್ಳು ದೂರನ್ನು ನೀಡಿದ್ದು ಆ ಬಗ್ಗೆ ಹೇಳಿಕೆ ನೀಡಿರುತ್ತೇನೆಂದು ಉತ್ತರಿಸಿರುತ್ತಾರೆ. ವಾದಿಯು ಎಲ್ಲೂ ಸಹ ನ್ಯಾಯ ಸಿಗದ ಕಾರಣ ನನ್ನ ವಿರುದ್ಧ ಖಾಸಗಿ ಫಿರ್ಯಾದನ್ನು ನ್ಯಾಯಾಲಯದಲ್ಲಿ ದಾಖಲಿಸಿರುತ್ತಾರೆಂದರೆ ಸರಿ. ಸದರಿ ಖಾಸಗಿ ಫಿರ್ಯಾದಿನ ಮೇಲೆ ತನಿಖೆ ಮಾಡಲು ಪೊಲೀಸರಿಗೆ ಆದೇಶಿಸಿದ್ದು , ತನಿಖಾ ಕಾಲದಲ್ಲಿ ಪೊಲೀಸರ ಮೇಲೆ ಪ್ರಭಾವ ಬೀರಿ ಸುಳ್ಳು ಬಿ ಅಂತಿಮ ವರದಿಯನ್ನು

ಸಲ್ಲಿಸಲು ಕಾರಣವಾಗಿರುತ್ತೇನೆಂದರೆ ಸರಿಯಲ್ಲ. ಪೊಲೀಸರು ಸಹ ಬಾವಿಗೆ ಕೊಳಕು ನೀರನ್ನು ಬಿಡದಂತೆ ಬಾವಿ ಬಿಟ್ಟು ಕಾಂಪೌಂಡ್ ನಿರ್ಮಾಣ ಮಾಡಿಕೊಳ್ಳುವಂತೆ ನನಗೆ ಸೂಚಿಸಿರುತ್ತಾರೆಂದರೆ ಸರಿಯಲ್ಲ.

ನಾನು ನಿಪಿ-9 ರಂತೆ ನೀಡಿದ ನೋಟೀಸಿಗೆ ವಾದಿಯು ನೀಡಿರುವ ಪ್ರತ್ಯುತ್ತರದಲ್ಲಿ ನಾನು ಬಾವಿಯ ನೀರನ್ನು ಕಲುಷಿತಗೊಳಿಸಿದ್ದು , ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳಷ್ಟು ಹಾನಿಯುಂಟಾಗಿದ್ದು ಸದರಿ ನಷ್ಟವನ್ನು ಭರ್ತಿ ಮಾಡಿಕೊಡುವಂತೆ ಸೂಚಿಸಿರುತ್ತಾರೆಂದರೆ ಸರಿಯಲ್ಲ. ಸದರಿ ಪ್ರತ್ಯುತ್ತರಕ್ಕೆ ನೀವು ಯಾವುದೇ ಉತ್ತರ ನೀಡಿರುವುದಿಲ್ಲ ಎಂದರೆ ಸಾಕ್ಷಿದಾರರು ಉತ್ತರ ನೀಡುವ ಅವಶ್ಯಕತೆ ಇರುವುದಿಲ್ಲವೆಂದು ಉತ್ತರಿಸಿರುತ್ತಾರೆ. ವಾದಿಯು ನನ್ನ ವಿರುದ್ಧ ಖಾಸಗಿ ಫಿರ್ಯಾದನ್ನು ಸಲ್ಲಿಸಿದ ನಂತರ ಸುಳ್ಳು ನೋಟೀಸನ್ನು ನೀಡಿರುತ್ತೇನೆಂದರೆ ಸರಿಯಲ್ಲ. ವಾದಿಗೆ ನಲ್ಲಿ ಸಂಪರ್ಕದ ಮೂಲಕವು ಸಹ ಸರಿಯಾಗಿ ಕುಡಿಯಲು ನೀರು ಸಹ ಸರಿಯಾಗಿ ಬರುತ್ತಿರುವುದಿಲ್ಲ ಅದರಿಂದಲೂ ಸಹ ವಾದಿಗೆ ತೊಂದರೆಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ವಾದಿಯ ಬಾವಿ ನೀರನ್ನು ಕಲುಷಿತಗೊಳಿಸಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಕೃತ್ಯದಿಂದ ವಾದಿಗೆ ಮಾನಸಿಕವಾಗಿ ತೊಂದರೆಯಾಗಿರುತ್ತದೆ ಎಂದರೆ ಸುಳ್ಳು. ನನ್ನ ಕೃತ್ಯದಿಂದ ವಾದಿ ನಿರ್ಮಿಸಿದ್ದ ಬಾವಿಯು ಸಂಪೂರ್ಣ ಹಾಳಾಗಿದ್ದು ಒಂದುವರೆ ಲಕ್ಷ ರೂಪಾಯಿಗಳಷ್ಟು ನಷ್ಟ ಉಂಟಾಗಿದ್ದು , ಸದರಿ ನಷ್ಟ ಭರ್ತಿ ಮಾಡಿಕೊಡಲು ನಾನೇ ಬಾಧ್ಯಸ್ಥನಾಗಿರುತ್ತೇನೆಂದರೆ ಸರಿಯಲ್ಲ.

ದಿನಾಂಕಃ 06/06/2014 ರಂದು ನಾನು ನಮ್ಮ ಮನೆಯ ಕಶ್ಮಲದ ನೀರನ್ನು ವಾದಿ ನಿರ್ಮಿಸಿರುವ ಬಾವಿಗೆ ಬಿಟ್ಟಿರುತ್ತೇನೆಂದರೆ ಸರಿಯಲ್ಲ. ಈ ಬಗ್ಗೆ ಮೆಣಸೆ ಗ್ರಾಮ ಪಂಚಾಯಿತಿಯಿಂದ ನನಗೆ ತಿಳುವಳಿಕೆ ನೀಡಿದ್ದರೂ ಎಂದರೆ ಸರಿಯಲ್ಲ. ನಿವೇಶನ ಖರೀದಿಸುವ ಸಮಯದಲ್ಲಿ ನಿವೇಶನವನ್ನು ಅಳತೆ ಮಾಡಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ನಾನು ಹಾಗೂ ವಾದಿ ವಿಶ್ವಾಸದಿಂದ ಇದ್ದ ಕಾರಣ ನಿವೇಶನ ಅಳತೆ ಮಾಡಿಸಿರುವುದಿಲ್ಲವೆಂದು ಉತ್ತರಿಸಿರುತ್ತಾರೆ. ಕ್ರಯಕ್ಕೆ ತೆಗೆದುಕೊಂಡ ನಂತರವೂ ನೀವು ನಿವೇಶನದ ಅಳತೆ ಮಾಡಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ವಿಶ್ವಾಸದಿಂದ ಸ್ವತ್ತನ್ನು ಖರೀದಿಸಿದ್ದು ಆ ನಂತರ ನನಗೆ ರಾಜಸ್ಥಾನಕ್ಕೆ ವರ್ಗಾವಣೆಯಾಗಿರುತ್ತದೆ ನಂತರ ಮನೆ ನಿರ್ಮಿಸುವ ಸಮಯದಲ್ಲಿ ಒತ್ತುವರಿ ಬಗ್ಗೆ ಗೊತ್ತಾಗಿರುತ್ತದೆ ಎಂದು ನುಡಿದಿರುತ್ತಾರೆ. ವಾದಿ ನಿರ್ಮಿಸಿರುವ ಬಾವಿಯ ಮೇಲೆ ನನಗೆ ಯಾವುದೇ ರೀತಿಯ ಅಧಿಕಾರ ಇರುವುದಿಲ್ಲ ಎಂದರೆ ಸಾಕ್ಷಿದಾರರು ನನ್ನ

ಒಂದುವರೆ ಅಡಿ ಜಾಗವನ್ನು ಅತಿಕ್ರಮಿಸಿ ಬಾವಿ ನಿರ್ಮಿಸಿರುವುದರಿಂದ ಬಾವಿಯ ಮೇಲೆ ನನಗೂ ಸಹ ಅಧಿಕಾರ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನನಗೆ ಬಾವಿಯ ಮೇಲೆ ಅಧಿಕಾರವಿರುತ್ತದೆ ಎಂದು ಅಹಂಕಾರ ಹಾಗೂ ದುರುದ್ದೇಶದಿಂದ ಬಾವಿಗೆ ಕೊಳಕು ನೀರನ್ನು ಬಿಟ್ಟಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿದಾರರು ಈ ಹಂತದಲ್ಲಿ ಮುಂದುವರೆದು ಎರಡು ಪೈಪುಗಳನ್ನು ಅಳವಡಿಸಿ ಮುಂದಕ್ಕೆ ತೆಗೆದುಕೊಂಡು ಹೋಗಿ ಬಿಟ್ಟಿರುತ್ತೇನೆಂದು ಉತ್ತರಿಸಿರುತ್ತಾರೆ. ಆ ರೀತಿ ಯಾವುದೇ ಪೈಪುಗಳನ್ನು ಅಳವಡಿಸಿರುವುದಿಲ್ಲ ನನ್ನ ಹಾಗೂ ವಾದಿ ನಡುವೆ ಮೌಖಿಕ ಒಪ್ಪಂದ ಆಗಿದ್ದರೆ ಆ ಬಗ್ಗೆ ಕರಾರು ಮಾಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಹಾಗೂ ವಾದಿಯ ಜಾಗದ ನಡುವೆ ನಿರ್ಮಿಸಿಕೊಂಡಿರುವ ಕಾಂಪೌಂಡನ್ನು ನಾನು ತೆರವುಗೊಳಿಸುತ್ತೇನೆಂದು ತಿಳಿಸಿದ್ದು ವಾದಿಯು ವಿಶ್ವಾಸದಿಂದ ಇದ್ದರಿಂದ ಒಪ್ಪಿಕೊಂಡಿರುತ್ತಾರೆಂದರೆ ಸರಿಯಲ್ಲ.

ವಾದಿಯ ಹೆಸರಿನಲ್ಲಿರುವ ಅಸೆಸ್ಮೆಂಟ್ ನಂಃ 312/312 ರ ಸ್ವತ್ತಿನ ಮೇಲೆ ನನಗೆ ಯಾವುದೇ ಅಧಿಕಾರ ಇರುವುದಿಲ್ಲ.

( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಪಾಟೀ ಸವಾಲು ಮುಂದೂಡಲಾಯಿತು.)

**(ದಿನಾಂಕಃ 09-09-2019 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**